ಕೂಲಂಕುಷವಾಗಿ ಪರಿಶೀಲನೆ ನಡೆಸುವಂತೆ ಮತ್ತು ಅನರ್ಹರ ಆಯ್ಕೆಗೆ ಕಾರಣರಾದವರ ಮೇಲೆ ಶಿಸ್ತಿನ ಕ್ರಮ ಜರುಗಿಸುವಂತೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಆ) ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ.

ಇ) ಫಲಾನುಭವಿಗಳ ಆಯ್ಕೆ ಪಟ್ಟಿಯಲ್ಲಿ ಸೇರಿರುವ ಅನರ್ಹ ಫಲಾನುಭವಿಗಳ ವಿರುದ್ಧ ಮೊಳಕಾಲ್ಮೂರು ತಾಲ್ಲೂಕಿನ ಹಿರೆಕೆರೆಹಳ್ಳಿ ಗ್ರಾಮ ಪಂಚಾಯತಿಯಲ್ಲಿ 1, ಮಂಡ್ಯ ತಾಲ್ಲೂಕಿನ ಬಸರಾಳು ಗ್ರಾಮ ಪಂಚಾಯಿತಿಯಲ್ಲಿ 1, ಶಿವಮೊಗ್ಗ ತಾಲ್ಲೂಕಿನ ಹಾರನಹಳ್ಳಿ ಗ್ರಾಮ ಪಂಚಾಯತಿಯಲ್ಲಿ 1 ಮೊಕದ್ದಮೆಗಳು ಸೇರಿ ಒಟ್ಟು 3 ಕ್ರಿಮಿನಲ್ ಮೊಕದ್ದಮೆಗಳನ್ನು 43 ಫಲಾನುಭವಿಗಳ ಮೇಲೆ ಸಂಬಂಧಪಟ್ಟ ತಾಲ್ಲೂಕುಗಳ ಅನುಷ್ಠಾನಾಧಿಕಾರಿಗಳಿಂದ ದಾಖಲಿಸಲಾಗಿರುತ್ತದೆ.

ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದು

724 (250) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿದ್ಯುತ್ ಕೊರತೆಯ ಕಾರಣದಿಂದ ಹೆಚ್ಚುವರಿಯಾಗಿ 25 ಕೆ.ವಿ.ಎ. 63 ಕೆ.ವಿ.ಎ. 75 ಕೆ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ಎಷ್ಟು ಪ್ರಸ್ತಾವನೆ/ಅರ್ಜಿಗಳು ಬಂದಿವೆ; (ವಿವರ ಒದಗಿಸುವುದು);

ಆ) ಎಷ್ಟು ಅರ್ಜಿಗಳಿಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ವಿತರಿಸಿದ್ದೀರಿ; ವಿವಿಧ ಬೇಡಿಕೆಗಳ ಪ್ರಸ್ತಾವನೆಗಳ ಬಗ್ಗೆ ತೆಗೆದುಕೊಂಡ ಕ್ರಮಗಳೇನು ವಿವರ ನೀಡುವುದು;

ಇ) ತಮ್ಮಡಿಹಳ್ಳಿ, ಪಿಳ್ಳಂಗೆರೆ, ಕೊಮ್ಮನಾಳು, ಸಂತೆಕಡೂರು, ನಿದಿಗೆ ಹೋಬಳಿಗಳಲ್ಲಿ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಲು ತಾಂತ್ರಿಕ

ವರದಿಯನ್ನು ಸಲ್ಲಿಸಿದ್ದು, ಈ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ; (ವಿವರ ಒದಗಿಸುವುದು)

ಈ) ಗ್ರಾಮೀಣ ಉಪ ವಿಭಾಗದಲ್ಲಿ 55–60 ಸಾವಿರಕ್ಕೂ ಹೆಚ್ಚು ಗ್ರಾಹಕರಿದ್ದು ಇದನ್ನು ವಿಭಜಿಸಿ ಹೊಸ ಉಪ ವಿಭಾಗವನ್ನು ರಚಿಸುವ ಮತ್ತು ಪ್ರತಿ ಶಾಖೆಯಲ್ಲಿ 5–6 ಸಾವಿರ ಸ್ಥಾವರವಿದ್ದು ಗ್ರಾಹಕರ ಅನುಕೂಲಕ್ಕಾಗಿ ಸಲ್ಲಿಸಿದ ಪ್ರಸ್ತಾವನೆ ಯಾವ ಹಂತದಲ್ಲಿದೆ; (ವಿವರ ಒದಗಿಸುವುದು)

ಉ) ಗ್ರಾಮೀಣ ಉಪ ವಿಭಾಗಕ್ಕೆ ಮೊಬೈಲ್ ಸರ್ವೀಸ್ ವಾಹನದ ಬೇಡಿಕೆಯ ಪ್ರಸ್ತಾವನೆ ಏನಾಗಿದೆ ಎಂಬ ವಿವರ, ಗ್ರಾಮೀಣ ಭಾಗದಲ್ಲಿ ಸಿಬ್ಬಂದಿ ಕೊರತೆಯಿಂದ ಉತ್ತಮ ಸೇವೆ ದೊರಕುತ್ತಿಲ್ಲ, ಸಿಬ್ಬಂದಿ ನೇಮಕಾತಿಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ; (ವಿವರ ನೀಡುವುದು)

ಊ) ವಿದ್ಯುತ್ ಸಾಮಗ್ರಿಗಳ ಕೊರತೆಯಿಂದ ಸಂಪರ್ಕ ನಿಧಾನ ಗತಿಯಲ್ಲಿದ್ದು, ಕುಡಿಯುವ ನೀರು, ಗಂಗಾ ಕಲ್ಯಾಣ ಯೋಜನೆಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ? (ವಿವರ ಒದಗಿಸುವುದು)

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ವ್ಯಾಪ್ತಿಯ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2011–12ನೇ ಸಾಲಿನಲ್ಲಿ ವಿವಿಧ ಸಾಮರ್ಥ್ಯದ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಒಟ್ಟು 67 ಪ್ರಸ್ತಾವನೆಗಳು ಮತ್ತು 2012–13 (ಜೂನ್ 12ರ ಅಂತ್ಯಕ್ಕೆ) ನೇ ಸಾಲಿನಲ್ಲಿ 3 ಪ್ರಸ್ತಾವನೆಗಳು ಬಂದಿದ್ದು, ಅವುಗಳ ವಿವರಗಳು ಈ ಕೆಳಕಂಡಂತಿವೆ:–

ಕ್ರ. ಸಂ.	ಪರಿವರ್ತಕದ ಸಾಮರ್ಥ್ಯ	2011–12ನೇ ಸಾಲಿನಲ್ಲಿ ಬಂದಿರುವ ಪ್ರಸ್ತಾವನೆಗಳು	2012–13 (ಜೂನ್ 12ರ ಅಂತ್ಯಕ್ಕೆ)ನೇ ಸಾಲಿನಲ್ಲಿ ಬಂದಿರುವ ಪ್ರಸ್ತಾವನೆಗಳು
1	25 ಕೆವಿಎ	15	2
2	63 ಕೆವಿಎ	52	1
	ಒಟ್ಟು	**67**	**3**

ಆ) ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ವ್ಯಾಪ್ತಿಯ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ 2011–12ನೇ ಸಾಲಿನಲ್ಲಿ ಒಟ್ಟು 53 ಮತ್ತು 2012–13ನೇ ಸಾಲಿನಲ್ಲಿ (ಜೂನ್ 12ರ ಅಂತ್ಯಕ್ಕೆ) 6 ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಿ, ಚಾಲನೆಗೊಳಿಸಲಾಗಿದ್ದು, ಅವುಗಳ ವಿವರಗಳು ಈ ಕೆಳಕಂಡಂತಿವೆ:–

ಕ್ರ. ಸಂ.	ಪರಿವರ್ತಕದ ಸಾಮರ್ಥ್ಯ	2011–12	2012–13 (ಜೂನ್ 12ರ ಅಂತ್ಯಕ್ಕೆ)
1	25 ಕೆವಿಎ	8	–
2	63 ಕೆವಿಎ	45	6
	ಒಟ್ಟು	**53**	**6**

ಬಾಕಿ ಉಳಿದಿರುವ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲಾಗಿದ್ದು, ಪರಿವರ್ತಕಗಳನ್ನು ಅಳವಡಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ಸಂತೆಕಡೂರು, ನಿದಿಗೆ ಗ್ರಾಮಗಳಲ್ಲಿ 66 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು 2012–13ನೇ ಸಾಲಿನಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಾರ್ಷಿಕ ಕಾಮಗಾರಿಗಳ ಕಾರ್ಯ ಸೂಚಿಯಲ್ಲಿ ಸೇರಿಸಲಾಗಿದೆ. ಉಳಿದಂತೆ ತಮ್ಮಡಿಹಳ್ಳಿ, ಪಿಳ್ಳಂಗೆರೆ ಮತ್ತು

ಕೊಮ್ಮನಾಳು ಗ್ರಾಮಗಳ ವಿದ್ಯುತ್ ಉಪ ಕೇಂದ್ರ ಸ್ಥಾಪನೆಯ ವಿವರಗಳು ಪರಿಶೀಲನೆಯ ಹಂತದಲ್ಲಿವೆ.

ಈ) ಶಿವಮೊಗ್ಗ ಗ್ರಾಮೀಣ ಉಪ ವಿಭಾಗವನ್ನು ವಿಭಜಿಸಿ ಹೊಸ ಉಪ ವಿಭಾಗವನ್ನು ರಚಿಸುವ ಪ್ರಸ್ತಾವನೆಯು ಪರಿಶೀಲನೆಯ ಹಂತದಲ್ಲಿದೆ.

ಉ) ಶಿವಮೊಗ್ಗ ಗ್ರಾಮೀಣ ಉಪ ವಿಭಾಗಕ್ಕೆ ಮಳೆಗಾಲದ ತುರ್ತು ಅವಶ್ಯಕತೆಗಾಗಿ ನಾಲ್ಕು ತಿಂಗಳ ಅವಧಿಗೆ ಮೊಬೈಲ್–ಸರ್ವೀಸ್ ವಾಹನವನ್ನು ಈಗಾಗಲೇ ಒದಗಿಸಲಾಗಿದೆ.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯಲ್ಲಿ ಸಹಾಯಕ ಮಾರ್ಗದಾಳು ಹುದ್ದೆಗೆ ನೇರ ನೇಮಕಾತಿಗಾಗಿ ಈಗಾಗಲೇ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಕರೆದಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಊ) ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯಲ್ಲಿ ವಿವಿಧ ಕಾಮಗಾರಿಗಳ ಅವಶ್ಯಕತೆಗೆ ಅನುಗುಣವಾಗಿ ವಿದ್ಯುತ್ ಸಾಮಗ್ರಿಗಳನ್ನು ಖರೀದಿಸಿ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕುಡಿಯುವ ನೀರು ಮತ್ತು ಗಂಗಾ ಕಲ್ಯಾಣ ಯೋಜನೆಗಳ ಕಾಮಗಾರಿಗಳನ್ನು ಆದ್ಯತೆ ಮೇಲೆ ಕೈಗೊಳ್ಳಲಾಗಿದ್ದು, ತ್ವರಿತವಾಗಿ ಪೂರ್ಣಗೊಳಿಸಿ ಸಂಪರ್ಕ ನೀಡಲಾಗುತ್ತಿದೆ. 2011–12 ಹಾಗೂ 2012–13ನೇ ಸಾಲಿನಲ್ಲಿ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾದ ವಿವರಗಳು ಈ ಕೆಳಗಿನಂತಿವೆ:–

ಯೋಜನೆ	2011–12	2012–13 (ಜೂನ್ 12ರ ಅಂತ್ಯಕ್ಕೆ)
ಕುಡಿಯುವ ನೀರು	11	5
ಗಂಗಾ ಕಲ್ಯಾಣ	71	32
ಒಟ್ಟು	**82**	**37**